ಆ) ಕೆ.ಜಿ.ಎಫ್. ಮುನಿಸಿಪಾಲಿಟಿಯಲ್ಲಿ ರೆಕಾರ್ಡ್‌ಗಳು ನಾಪತ್ತೆ.

ಶ್ರೀ ಎಸ್.ರಾಜೇಂದ್ರನ್ (ಕೆ.ಜಿ.ಎಫ್): ಮಾನ್ಯ ಉಪಸಭಾಧ್ಯಕ್ಷರೆ, ಜೀರೋ ಅವರ್‌ನಲ್ಲಿ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದು ನನಗೆ ಬಹಳ ಸಂತೋಷವಾಗಿದೆ. ನಮ್ಮ ಕೆ.ಜಿ.ಎಫ್. ಕಾನ್‌ಸ್ಟಿಟ್ಯೂಯೆನ್ಸಿಯಲ್ಲಿ ಬೇಕಾದಷ್ಟು ಮಾಲ್ ಅಡ್ಮಿನಿಸ್ಟ್ರೇಷನ್ ನಡೆಯುತ್ತಿದೆ. I have written so many letters to the Municipality, but no reply. I have written a letter to the Deputy commissioner, no reply. I contacted the Director of Municipality but no reply has been received. Finally submitted it to the Principal Secretary, HUD-1 ಅದು ಕೊಟ್ಟು 8 ತಿಂಗಳಾಗಿದೆ. 8 ತಿಂಗಳಿಂದ ನೋ ರಿಪ್ಲೈ. I brought this to the Minister's notice also. In front of the Minister I asked the Principal Secretary. He said, ಡಾಕ್ಯುಮೆಂಟ್ಸ್ ನಮ್ಮ ಸರ್ಕಾರದಲ್ಲಿಲ್ಲ ಎಂದರು I showed those bogus documents, false documents, all the documents which I brought it to the notice of the Government ಸರ್ಕಾರ ಕೋಟ್ಯಾಂತರ ರೂಪಾಯಿ ಬೆಲೆಬಾಳುವ ಜಮೀನನ್ನು ಪ್ರೈವೇಟ್‌ಗೆ ಕೊಟ್ಟಿದೆ. ಅದರ ಮೇಲೆ, ಸರ್ಕಾರದ ಉತ್ತರವೇನೆಂದರೆ, ನಮ್ಮಲ್ಲಿ ಆ ರೆಕಾರ್ಡ್ಸ್ ಇಲ್ಲ ಎಂದು When there is no record how can they run the administration? 20 ವರ್ಷಗಳ ಮುಂಚೆ ಎಜ್ಯುಕೇಷನ್ ಮಿನಿಸ್ಟರ್ ಕಾಪಿ ಹೊಡೆದಿರುವ ಬಗ್ಗೆ ಸರ್ಕಾರದಲ್ಲಿ ರೆಕಾರ್ಡ್ಸ್ ಇರುವುದು, the matter was 10 years old; ಆದರೆ ಸರ್ಕಾರ ಕೊಟ್ಟಿರುವ ಲ್ಯಾಂಡ್ ರೆಕಾರ್ಡ್ ಇಲ್ಲವೇ? Therefore, I demand that hon'ble Minister for Municipality to send this to the Lok Ayukta to find out and to book criminal cases against those who are involved in the Municipal Administration.

ಶ್ರೀ ಮಿರಾಜುದ್ದೀನ್ ಎನ್.ಪಟೇಲ್ (ಪೌರಾಡಳಿತ ಸಚಿವರು): ಮಾನ್ಯ ಉಪಸಭಾಧ್ಯಕ್ಷರೆ, ಮಾನ್ಯ ಸದಸ್ಯರಾದ ಶ್ರೀ ಎಸ್.ರಾಜೇಂದ್ರರವರು ಆಫೀಸ್‌ನಲ್ಲಿ ರೆಕಾರ್ಡ್ ಇಲ್ಲವೆಂದು ಅವರೇನು ಅಲಿಗೇಷನ್ಸ್ ಮಾಡುತ್ತಿದ್ದಾರೆ, ಇದಕ್ಕೆ ಬದಲು ಅವರು ಹೇಳಿದ ಪ್ರಕಾರ, ನಾನು ಅವರ ಮುನಿಸಿಪಾಲಿಟಿಗೆ ಹೋಗಿ, ಅವರಿಗೆ ಮತ್ತು ಅಲ್ಲಿನ ಅಧ್ಯಕ್ಷರು ಹಾಗೂ ಕಮಿಷನರ್‌ರವರ ಜೊತೆ ಮಾತನಾಡಿ, ಅವರು ಯಾವುದನ್ನು ಕೇಳಿದ್ದಾರೆ, ಅದರ ಬಗ್ಗೆ ನಾನು ಕೇಳಿದೆ. ಆಮೇಲೆ, ಈ ಕಮೀಷನರ್‌ರವರು ಸರಿಯಾಗಿ ಕೆಲಸ ಮಾಡುತ್ತಿಲ್ಲ, ಇವರ ಮೇಲೆ ಬಹಳ ಅಲಿಗೇಷನ್ಸ್ ಇದೆ, ಇವರನ್ನು ಚೇಂಜ್ ಮಾಡಬೇಕೆಂದರು. ಆದ್ದರಿಂದ, ಅವರನ್ನು ಟ್ರಾನ್ಸ್‌ಫರ್ ಮಾಡಿ, ಆ ಜಾಗಕ್ಕೆ

ಬೇರೆಯನ್ನು ಪೋಸ್ಟಿಂಗ್ ಮಾಡಿದ್ದೇನೆ. ಎಚ್.ಯು.ಡಿ. ಇಲಾಖೆಗೆ ಪತ್ರ ಬರೆದಿದ್ದು, ಆದರೂ ಅಲ್ಲಿ ರೆಕಾರ್ಡ್ ಸಿಗುತ್ತಿಲ್ಲವೆಂಬ ಉತ್ತರವನ್ನೇನಾದರೂ ಅವರು ಕೊಟ್ಟರೆ, ಅದರ ಬಗ್ಗೆ ಲೋಕಾಯುಕ್ತ ಎನ್‌ಕ್ವೈರಿ ಮಾಡಬೇಕೆಂದು ತಾವೇನು ಹೇಳಿದ್ದೀರಿ, ಅದಕ್ಕೆ ನಾನು ಬದ್ಧನಾಗಿದ್ದು, ಲೋಕಾಯುಕ್ತಕ್ಕೆ ರೆಫರ್ ಮಾಡುತ್ತೇನೆ.

ಇ) ಸಿ.ಇ.ಟಿ.ಯಿಂದ ಆಲಾಟಾಗಿರುವ ವೈದ್ಯಕೀಯ ಸೀಟುಗಳು ರದ್ದಾಗುತ್ತಿರುವ ಪರಿಸ್ಥಿತಿ ಕುರಿತು.

ಶ್ರೀ ಎನ್.ಸುರೇಶ್‌ಕುಮಾರ್ (ರಾಜಾಜಿನಗರ): ಮಾನ್ಯ ಉಪಸಭಾಧ್ಯಕ್ಷರೆ, ಇವತ್ತು ಸರ್ಕಾರದ ಜವಾಬ್ದಾರಿರಹಿತ ನಡವಳಿಕೆಯಿಂದ ಕರ್ನಾಟಕದಲ್ಲಿ ಸಿ.ಇ.ಟಿ.ಯಿಂದ ಯಾರ್ಯಾರು ವೈದ್ಯಕೀಯ ಶಿಕ್ಷಣಕ್ಕೆ ಪ್ರವೇಶಾವಕಾಶ ಪಡೆದಿದ್ದರು, ಆ ಪ್ರತಿಭಾವನ್ವಿತ ವಿದ್ಯಾರ್ಥಿಗಳ ಬದುಕಿನಲ್ಲಿ ಅಂಧಕಾರ ಬಂದಿದೆ. ಸೋಮವಾರ ಸುಪ್ರೀಂ ಕೋರ್ಟ್ ಒಂದು ಆದೇಶ ನೀಡಿದೆ. The intake fixed by Indian Medical Council was final and Karnataka should adhere to it ಎಂದು ಒಂದು ಡೈರೆಕ್ಷನ್ ಕೊಟ್ಟು, ಆಗಸ್ಟ್ 12ನೇ ತಾರೀಖು ಸಿ.ಇ.ಟಿ.ಯಿಂದ ಯಾರ್ಯಾರಿಗೆ ಅಲಾಟ್ ಆಗಿತ್ತು, ಇವತ್ತು ಅವರದೆಲ್ಲಾ ನಲ್ ಅಂಡ ವಾಯ್ಡ್ ಎಂದು ಹೇಳುವಂತಹ ಪರಿಸ್ಥಿತಿ ಬಂದಿದೆ. ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು 18ನೇ ತಾರೀಖಿನ ಮೇಲ್ಮನೆಯಲ್ಲಿ ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾ ಏನಿದೆ ಅದು ಕೇವಲ ಶಿಫಾರಸ್ಸು ಮಾಡಬೇಕೇ ಹೊರತು, ಅದನ್ನು ಜಾರಿಗೆ ತರುವ ಅಧಿಕಾರವಿಲ್ಲ ಎನ್ನುವಂಥ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. 1992ನೇ ಇಸವಿಯವರೆಗೂ ಮೆಡಿಕಲ್ ಕೌನ್ಸಿಲ್‌ಆಫ್ ಇಂಡಿಯಾಗೆ ಅಧಿಕಾರವಿರಲಿಲ್ಲ. ಆಂಧ್ರಪ್ರದೇಶದಲ್ಲಿ ಯದ್ವಾತದ್ವಾ ಮೆಡಿಕಲ್ ಕಾಲೇಜುಗಳು ಪ್ರಾರಂಭವಾದಾಗ, ಒಂದು ದೊಡ್ಡ ವಿವಾದವಾದಾಗ, 1992, ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾ ಆಕ್ಟ್ ತಂದು, that MCI has been provided teeth to regulate regarding intake of admission etc. ಈವತ್ತು That is a mandatory organisation ಆದರದ್ದು ಏನೇ ಇದ್ದರೂ ಕೂಡ ಒಪ್ಪಿಕೊಳ್ಳಲೇ ಬೇಕಾದ ಪರಿಸ್ಥಿತಿ ಬಂದಿದೆ. 1997-98ನೇ ಸಾಲಿನ ವೈದ್ಯಕೀಯ ಶಿಕ್ಷಣಕ್ಕೆ ಎಂ.ಸಿ.ಐ ಫಿಕ್ಸ್ ಮಾಡಿದ್ದು 2.105 ಸೀಟುಗಳು. ನಮ್ಮ ಸರ್ಕಾರ ಇವತ್ತು ಕೊಟ್ಟಿರುವಂಥಾದ್ದು 2,680 ಸೀಟುಗಳು. ಈ ಹಿನ್ನೆಲೆಯಲ್ಲಿ ನಾನು ಸರ್ಕಾರದ ಗಮನವನ್ನು ಸರ್ವೋಚ್ಚ ನ್ಯಾಯಲಯದ ತೀರ್ಪಿನ ಕಡೆ ಸೆಳೆಯುತ್ತಾ, ಇವತ್ತು ಎಂ.ಸಿ.ಐ.ನ ಪ್ರೆಸಿಡೆಂಟ್ she has accused that the Karnataka Government is flouting the July 17th High Court order by fixing a higher MBBS intake ಈ ರೀತಿಯ ಪರಿಸ್ಥಿತಿ. ಎಂ.ಸಿ.ಐ.ನದು ಮ್ಯಾಂಡೇಟರಿ ಇದ್ದರೂ ಕೂಡ, ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಮೇಲ್ಮನೆಯಲ್ಲಿ ಸತ್ಯಕ್ಕೆ ದೂರವಾದ ಹೇಳಿಕೆ ನೀಡಿದ್ದಾರೆ. ಇವತ್ತು ಪ್ರತಿಭಾನ್ವಿತ

ವಿದ್ಯಾರ್ಥಿ-ವಿದ್ಯಾರ್ಥಿನಿಯರ ಜೀವನ ಅಂಧಕಾರದಲ್ಲಿದೆ. ಸಿ.ಇ.ಟಿ.ಯಿಂದ ಏನು ಅಲಾಟಾಗಿದೆ ಅದೆಲ್ಲವೂ ಕ್ಯಾನ್ಸಲ್ ಆಗುವ ಪರಿಸ್ಥಿತಿ ಇದೆ. ಈ ಹಿನ್ನೆಲೆಯಲ್ಲಿ ವೈದ್ಯಕೀಯ ಶಿಕ್ಷಣ ಸಚಿವರು ಯಾವುದೇ ರೀತಿಯ ಒಂದು ನೈತಿಕ ಹಕ್ಕನ್ನು ಉಳಿಸಿಕೊಂಡಿಲ್ಲ. ರಾಜ್ಯದ ವೈದ್ಯಕೀಯ ಶಿಕ್ಷಣ ವಿದ್ಯಾರ್ಥಿಗಳ ಬಾಳನ್ನೇ ಇವತ್ತು ಹಾಳುಗೆಡವಿದ್ದಾರೆ. ಈ ಕುರಿತು ನಾನು ಸರ್ಕಾರದ ಗಮನವನ್ನು ಸೆಳೆಯುತ್ತಾ, ಈ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಮತ್ತು ಅವರಿಗೇನಾದರೂ ಒಂದು ಬಾಳಿನ ದಾರಿಯನ್ನು ತೋರಿಸುತ್ತೀರಾ ಎಂಬುದನ್ನು ನಾನು ಕೇಳಲಿಕ್ಕೆ ಇಚ್ಛಿಪಡುತ್ತೇನೆ.

ಶ್ರೀ ವೈಜನಾಥ ಪಾಟೀಲ್ (ಚಿಂಚೋಳಿ): ಹಿಂದುಳಿದ ಭಾಗಗಳಿಗೆ ಮಹಾರಾಷ್ಟ್ರದಲ್ಲಿ ಏನು ವ್ಯವಸ್ಥೆ ಇದೆ ಅದರ ಬಗ್ಗೆ ನಾನು ಕೇಳಿದ್ದೆ. ಆದರೆ, ಈತನಕ ಉತ್ತರ ಸಿಕ್ಕಿಲ್ಲ. ಎಲ್ಲವನ್ನೂ ಸೇರಿಸಿ ಉತ್ತರ ಕೊಡುತ್ತಾರೆಂದು ನಾನು ಭಾವಿಸುತ್ತೇನೆ.

ಶ್ರೀ ಎಂ.ಸಿ.ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಉಪಸಭಾಧ್ಯಕ್ಷರೆ, ಮಾನ್ಯ ಶ್ರೀ ಎಸ್.ಸುರೇಶ್‌ಕುಮಾರ್‌ರವರು ಸುಪ್ರೀಂ ಕೋರ್ಟ್‌ನಲ್ಲಿ ಈ ವೈದ್ಯಕೀಯ ಸೀಟುಗಳನ್ನು ನಿಗದಿ ಮಾಡಿರತಕ್ಕದ್ದರ ಬಗ್ಗೆ ನಮ್ಮ ಎಂ.ಸಿ.ಐ.ನವರು ರಾಜ್ಯ ಉಚ್ಚ ನ್ಯಾಯಲಯದ ಡಿವಿಜನಲ್ ಬೆಂಚ್‌ನ ವಿರುದ್ಧ ಒಂದು ಎಸ್‌ಎಲ್‌ಪಿಯನ್ನು ಅವರು ಹಾಕಿದ್ದಾರೆ. ಅದು ಮೊನ್ನೆ ಅಡ್ಮಿಷನ್‌ಗೆ ಬಂದಂಥ ಕಾಲದಲ್ಲಿ ಅವರು ಈ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠದವರು ಕೊಟ್ಟಿರತಕ್ಕ ಆಜ್ಞೆ ಯಾವುದಿದೆ, ಆ ಆಜ್ಞೆಗೆ ಸಂಪೂರ್ಣವಾಗಿ ತಡೆಯನ್ನು ಕೋರಿದ್ದಾರೆ. ಆದರೆ, ಸುಪ್ರೀಂ ಕೋರ್ಟ್‌ನವರು ಈ ಒಂದು ಎಸ್‌ಎಲ್‌ಪಿ ಅಡ್ಮಿಷನ್‌ಗೆ ಬಂದಂಥ ಕಾಲದಲ್ಲಿ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠದ ಆಜ್ಞೆಗೆ ಸಂಪೂರ್ಣವಾಗಿರತಕ್ಕ ತಡೆಯಾಜ್ಞೆಯನ್ನು ಕೊಡಲಿಲ್ಲ. ಆದರೆ, ಇವತ್ತು ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಬಂದಿರತಕ್ಕ ವಿಷಯದ ಆಧಾರದ ಮೇಲೆ ತಾವು ಈ ಪ್ರಶ್ನೆಯನ್ನು ಎತ್ತಿದ್ದೀರಿ ಎಂದು ನಾನು ಭಾವಿಸುತ್ತೇನೆ. ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಬಂದಿರತಕ್ಕ ವಿಚಾರ ಯಾವುದಿದೆ, ಅದು ಸುಪ್ರೀಂ ಕೋರ್ಟ್‌ನಲ್ಲಿ ಅವರು ಕೊಟ್ಟಿರತಕ್ಕ ಇಂಟರಿಂ ಆರ್ಡರ್‌ಗೆ ಬಹಳ ಭಿನ್ನವಾಗಿದೆ. ಸುಪ್ರೀಂ ಕೋರ್ಟ್‌ನವರು ಕೊಟ್ಟಿರತಕ್ಕ ಒಂದು ತೀರ್ಪು ಯಾವುದಿದೆ ಎಂದರೆ, ಅದರ ಫ್ಯಾಕ್ಸ್ ಮೆಸೇಜ್ ನನಗೆ ನಿನ್ನೆ 6 ಗಂಟೆಗೆ ಬಂದಿದೆ. ಅದರಲ್ಲಿ ಏನು ಹೇಳಿದ್ದಾರೆಂದರೆ, Admission to medical courses shall be confined only to the extent of the intake fixed by the Medical Council of India ಇಷ್ಟಕ್ಕೆ ಮಾತ್ರ, ಅವರು ಹೇಳಿದ್ದಾರೆಯೇ ಹೊರತು, ಬಾಕಿ ಯಾವ ವಿಷಯವನ್ನೂ ಹೇಳಿಲ್ಲ. ಇದರಲ್ಲಿ ಎರಡು ವಿಚಾರಗಳಿವೆ. ಒಂದನೆಯದು, ನಾವು ಈ ಇನ್‌ಟೇಕ್‌ನ್ನು ಫಿಕ್ಸ್ ಮಾಡುತ್ತಿರತಕ್ಕ ಸಂದರ್ಭದಲ್ಲಿ ನಮ್ಮ ರಾಜ್ಯದ ಉಚ್ಚ ನ್ಯಾಯಾಲಯದಲ್ಲಿ ಈ ಇನ್‌ಟೇಕ್ ಯಾವ ರೀತಿ ಇರಬೇಕೆಂದು ಹೇಳುತ್ತಿರತಕ್ಕಂಥದ್ದಕ್ಕೆ ಕಳೆದ ಸುಮಾರು 6-8 ತಿಂಗಳಿನಿಂದ ಒಂದು ಅರ್ಜಿಯನ್ನು

ದಾಖಲು ಮಾಡಿ, ಅದು ಏಕಪೀಠ ಸದಸ್ಯರ ಮುಂದೆ ಬಂದಂಥ ಕಾಲದಲ್ಲಿ, ಅವರು ಒಂದು ತೀರ್ಪನ್ನು ಕೊಟ್ಟಿದ್ದರು. ಅದಾದಮೇಲೆ, ಆ ತೀರ್ಪಿನ ವಿರುದ್ಧ ಸರ್ಕಾರ, ವಿಭಾಗೀಯ ಪೀಠಕ್ಕೆ ಅಪೀಲ್ ಮಾಡಿಯಾದ ಮೇಲೆ ವಿಭಾಗೀಯ ಪೀಠದವರು ತಮ್ಮ ತೀರ್ಪನ್ನು ಕೊಟ್ಟಿದ್ದಾರೆ. ಆ ತೀರ್ಪಿನಲ್ಲಿ ವಿಭಾಗೀಯ ಪೀಠ ಬಹಳ ಸ್ಪಷ್ಟವಾಗಿ ಹೇಳಿದೆ. ಮೆಡಿಕಲ್ ಕೌನ್ಸಿಲ್ ರೆಗ್ಯುಲೇಷನ್ ಎಂದು ಹೇಳುತ್ತಿರತಕ್ಕಂಥಾದ್ದು ಯಾವುದಿದೆ, ಅದು ಜಾರಿಗೆ ಬಂದಿರತಕ್ಕಂಥಾದ್ದು ದಿ: 1.6.92ರಲ್ಲಿ ದಿ: 1.6.92 ಒಳಗಡೆ ರಾಜ್ಯ ಸರ್ಕಾರ ನಮ್ಮ ವಿಶ್ವವಿದ್ಯಾಲಯಗಳ ಕಾನೂನಿನಡಿಯಲ್ಲಿ ಯಾವ ಇನ್‌ಟೇಕ್‌ನ್ನು ನಾವು ಫಿಕ್ಸ್ ಮಾಡಿದ್ದೇವೆ, ಆ ಇನ್‌ಟೇಕ್ ದಿ: 1.6.92ನೇ ಇಸವಿಗೆ ಮುಂಚೆ ಕೊಟ್ಟಿರತಕ್ಕಂಥಾದ್ದು it shall stand valid and the MCI regulations which have come into force after 1.6.92 have no application to this. ಆದರೆ 1-6-92 ಕಳೆದಾದಮೇಲೆ ಯಾವುದಾದರೂ ಹೊಸ ಕಾಲೇಜುಗಳಿಗೆ ಸಂಬಂಧಪಟ್ಟಹಾಗೆ ಅಥವಾ ಅವರು ಯಾವುದಾದರೂ ಇನ್‌ಟೇಕನ್ನು ಫಿಕ್ಸ್ ಮಾಡಿರತಕ್ಕದ್ದಿದ್ದರೆ Those intake will have to be applied after 1-6-92. ಅದರ ಬೇಸಿಸ್ ಮೇಲೆ ಮ್ಯಾಟ್ರಿಕ್ಸನ್ನು ನಾವು ಮೆಡಿಕಲ್ ಎಜ್ಯುಕೇಷನ್ ಡಿಪಾರ್ಟ್‌ಮೆಂಟ್ ಮುಖಾಂತರ, ಎಜುಕೇಷನ್ ಡಿಪಾರ್ಟ್‌ಮೆಂಟ್ ಮುಖಾಂತರ ಸಂಪೂರ್ಣವಾಗಿ ತಯಾರು ಮಾಡಿದ್ದೇವೆ. 1-6-92ರೊಳಗೆ ಯಾವಯಾವ ಕಾಲೇಜುಗಳಿಗೆ ಎಷ್ಟೆಷ್ಟು ಇನ್‌ಟೇಕ್‌ಗಳನ್ನು ಫಿಕ್ಸ್ ಮಾಡಿದ್ದೆವು ಅಂದಿನ ರಾಜ್ಯ ಸರ್ಕಾರ ಅದು ವ್ಯಾಲಿಡ್ ಎಂದು ಹೇಳಿದ ಮೇಲೆ ಆ ಇನ್‌ಟೇಕನ್ನು ತೆಗೆದುಕೊಂಡು ಒಂದು ಮ್ಯಾಟ್ರಿಕ್ಸನ್ನು 1-6-92 ಕಳೆದಾದಮೇಲೆ ನಮ್ಮ ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾದ ರೆಕಮೆಂಡೇಷನ್ ಮೇಲೆ ಭಾರತ ಸರ್ಕಾರದವರು ಎಷ್ಟು ಇನ್‌ಟೇಕನ್ನು ಯಾವ ಯಾವ ಕಾಲೇಜುಗಳಿಗೆ ಫಿಕ್ಸ್ ಮಾಡಿದ್ದಾರೆ ಆ ಇನ್ಟೇಕ್‌ಗಳನ್ನೂ ಕೂಡ ತೆಗೆದುಕೊಂಡು ಮ್ಯಾಟ್ರಿಕ್ಸ್‌ನ್ನು ತಯಾರು ಮಾಡಿದ್ದಾರೆ. ಆದ್ದರಿಂದ ಇವತ್ತಿಗೆ ಈ ಮ್ಯಾಟ್ರಿಕ್ಸ್ ಮತ್ತು ಕೌನ್ಸಿಲಿಂಗ್ ಆಗಿರತಕ್ಕದ್ದು ಯಾವುದಿದೆ ಅದರಲ್ಲಿ ಯಾವುದೇ ರೀತಿಯ ಗೊಂದಲ ಇಲ್ಲ. ಆದರೂ ಕೂಡ ನಾನು ನಿನ್ನೆ ಅಡ್ವೊಕೇಟ್ ಜನರಲ್‌ಅವರನ್ನು ದೆಹಲಿಯಲ್ಲಿ ಸಂಪರ್ಕ ಮಾಡಿದ್ದೇವೆ. ಅವರು ದೆಹಲಿಯಲ್ಲೇ ಇದ್ದಾರೆ. ಇವತ್ತು ಬೆಳಗ್ಗೆ ನಮ್ಮ ಮೆಡಿಕಲ್ ಎಜ್ಯುಕೇಷನ್ ಡಿಪಾರ್ಟ್‌ಮೆಂಟ್‌ನಲ್ಲಿರತಕ್ಕ ಇಬ್ಬರು ಅಧಿಕಾರಿಗಳು ದೆಹಲಿಗೆ ಹೋಗಿದ್ದಾರೆ. ಅವರ ಜೊತೆಯಲ್ಲಿ ನಾನು ನಿನ್ನೆ ದೂರವಾಣಿ ಮುಖಾಂತರ ಮಾತನಾಡಿ ನಾವು ಸುಪ್ರೀಂ ಕೋರ್ಟಿನಲ್ಲಿ ಒಂದು ಪ್ರಮಾಣಪತ್ರವನ್ನು ದಾಖಲು ಮಾಡಬೇಕು ಎಂದು ಹೇಳಿದ್ದೇನೆ. ಈ ಕೆಲಸವನ್ನು ಇವತ್ತು ಮಾಡಿ ನಾಳೆ ಸುಪ್ರೀಂ ಕೋರ್ಟಿನಲ್ಲಿ ಅದನ್ನು ದಾಖಲು ಮಾಡುತ್ತಾರೆ. ರಾಜ್ಯ ಸರ್ಕಾರ ತೆಗೆದುಕೊಳ್ಳಬೇಕಾಗಿರತಕ್ಕ ನಿಲುವನ್ನು ನಾವು ಸ್ಪಷ್ಟಮಾಡಿದ್ದೇವೆ. ಆದ್ದರಿಂದ ಇವತ್ತು ಕೌನ್ಸಿಲಿಂಗ್ ಏನಾಗಿದೆ, ನಿನ್ನೆಗೆ ಮತ್ತು ಇವತ್ತಿಗೆ ಈ ಮೆಡಿಕಲ್ ಸೀಟಿನ ಬಗ್ಗೆ ಕೌನ್ಸಿಲಿಂಗ್ ಸಂಪೂರ್ಣವಾಗಿ ಮುಗಿದೇ ಹೋಗಿದೆ. ಅಲಾಟ್‌ಮೆಂಟ್ ಬಹುಮಟ್ಟಿಗೆ

ಆಗಿಹೋಗಿಬಿಟ್ಟಿದೆ. ಇನ್ನು ಆಗಬೇಕಾಗಿರತಕ್ಕದ್ದು ಏನಿಲ್ಲ. ಏಕೆಂದರೆ ಒಂದು ದಿವಸಕ್ಕೆ 600 ವಿದ್ಯಾರ್ಥಿಗಳ ಪ್ರಕಾರ ಸುಮಾರು ಆರು ದಿವಸಕ್ಕೆ 3600 ಸೀಟುಗಳನ್ನು.... 3600 ಸೀಟುಗಳಲ್ಲಿ. ಒಟ್ಟಾರೆ 3600 ಸೀಟುಗಳಿಲ್ಲ. ಆದ್ದರಿಂದ ಈ ಕೌನ್ಸಿಲಿಂಗ್ ನಡೆದೇ ಆಗಿದೆ. ಮತ್ತು ನಾವು ಸುಪ್ರೀಂ ಕೋರ್ಟಿಗೆ ನೇರವಾಗಿ ಹೇಳುತ್ತಿದ್ದೇವೆ. ಡಿವಿಷನಲ್ ಬೆಂಚಿನವರು ಕೊಟ್ಟರತಕ್ಕ ಯಾವ ಒಂದು ತೀರ್ಪಿದೆ ಆ ತೀರ್ಪಿಗೆ ಅನುಗುಣವಾಗಿ ನಾವು ಈ ಕೆಲಸವನ್ನು ಮಾಡಿದ್ದೇವೆ. ಅಂತೂ ಸುಪ್ರೀಂ ಕೋರ್ಟಿನಲ್ಲಿ ಫೈಲ್ ಮಾಡುತ್ತಾ ಇರತಕ್ಕಂಥದರಲ್ಲಿ ನಾವು ಎಂ.ಸಿ.ಐ. ಯಾವುದನ್ನು ಗೌರ್ನಮೆಂಟ್ ಆಫ್ ಇಂಡಿಯಾಕ್ಕೆ ರೆಕಮೆಂಡ್ ಮಾಡಿದ್ದಾರೆ ಗೌರ್ನಮೆಂಟ್ ಆಫ್ ಇಂಡಿಯಾದವರು ಆ ಇನ್‌ಟೇಕನ್ನು 4 ಕಾಲೇಜುಗಳಿಗೆ ಮಾತ್ರ ಫಿಕ್ಸ್ ಮಾಡಿದ್ದಾರೆ. ಅದನ್ನು ಮಾಡಬೇಕಾದರೆ ಮೆಡಿಕಲ್ ಕೌನ್ಸಿಲ್ ರೆಗ್ಯುಲೇಷನ್ ಆಕ್ಟ್ ಸೆಕ್ಷನ್ 18ಕ್ಕೆ ಸಂಬಂಧಪಟ್ಟಹಾಗೆ ಅವರು ಅದನ್ನು ಮಾಡಿ ಕಳುಹಿಸಿದ್ದಾರೆ. ಅದನ್ನೂ ಕೂಡ ನಾವು ಆ ಮ್ಯಾಟ್ರಿಕ್ಸ್‌ನಲ್ಲಿ ಸಂಪೂರ್ಣವಾಗಿ ತೆಗೆದುಕೊಂಡೇ ಮಾಡಿದ್ದೇವೆ. ಆದ್ದರಿಂದ ಇವತ್ತಿಗೆ ನಾನು ಹೇಳುತ್ತಿದ್ದೇನೆ ನಾವು ಮ್ಯಾಟ್ರಿಕ್ಸ್‌ನ್ನು ಮಾಡಿರತಕ್ಕದ್ದರಲ್ಲಿ ಮತ್ತು ಕೌನ್ಸಿಲಿಂಗ್ ಆಗಿರತಕ್ಕದ್ದರಲ್ಲಿ ಯಾವುದೇ ಗೊಂದಲಕ್ಕೆ ಅವಕಾಶ ಇಲ್ಲ. ನಾನು ನೋಡಿದೆ ಇವತ್ತು, ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಬಹಳ ಬರೆದುಬಿಟ್ಟಿದ್ದಾರೆ. ಬಹುಶಃ ಕೌನ್ಸಿಲಿಂಗೇ ಕ್ಯಾನ್ಸಲ್ ಆಗಬೇಕಾಗುತ್ತದೆ, ಹೊಸದು ನಡೆಯಬೇಕಾಗುತ್ತದೆ, ಇಲ್ಲಿ ಈ ತರಹ ಆಗಿದೆ ಆ ತರಹ ಆಗಿದೆ ಎಂದು. ದಯವಿಟ್ಟು ನಮ್ಮ ಮಕ್ಕಳ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ನಮ್ಮ ರಾಜ್ಯದ ಉಚ್ಚ ನ್ಯಾಯಾಲಯದ ಡಿವಿಷನಲ್ ಬೆಂಚ್‌ನವರ ತೀರ್ಮಾನವನ್ನು ಗಮನದಲ್ಲಿಟ್ಟುಕೊಂಡು ಮೆಡಿಕಲ್ ಕೌನ್ಸಿಲ್‌ನವರು 1-6-92ರ ಮೇಲೆ ಯಾವುದನ್ನು ರೆಕಮೆಂಡೇಷನ್ ಮಾಡಿ ಗೌರ್ನಮೆಂಟ್ ಆಫ್ ಇಂಡಿಯಾದವರು ಅದಕ್ಕೆ ಒಪ್ಪಿಗೆ ಕೊಟ್ಟಿದ್ದಾರೆ ಅದನ್ನೂ ಇಟ್ಟುಕೊಂಡೇ ನಾವು ಈ ಕೆಲಸವನ್ನು ಮಾಡಿದ್ದೇವೆ. ಮತ್ತು ಸುಪ್ರೀಂ ಕೋರ್ಟಿಗೆ ವಾಸ್ತವಿಕವಾದಂಥ ವಿಚಾರವನ್ನು ತಿಳಿಸುವುದಕ್ಕೋಸ್ಕರ ಇವತ್ತು ಅಧಿಕಾರಿಗಳು ಹೋಗಿದ್ದಾರೆ. ಅಡ್ವೊಕೇಟ್ ಜನರಲ್ ಡೆಲ್ಲಿಯಲ್ಲಿದ್ದಾರೆ. ನಾಳೆ ಸುಪ್ರೀಂ ಕೋರ್ಟಿನಲ್ಲಿ ಪ್ರಮಾಣಪತ್ರವನ್ನು ಫೈಲ್ ಮಾಡುತ್ತೇವೆ. ಮಾನ್ಯ ಸಭಾಧ್ಯಕ್ಷರೇ ಮಕ್ಕಳ ಹಿತಕ್ಕೆ ಧಕ್ಕೆ ತರತಕ್ಕಂಥ ಕೆಲಸವೂ ಆಗುವುದಿಲ್ಲ. ಆದರೂ ಕೂಡ ಕೆಲವು ವಿಚಾರಗಳನ್ನು ಸುಪ್ರೀಂ ಕೋರ್ಟಿಗೆ ಹೇಳಬೇಕಾದ ಅವಶ್ಯಕತೆ ಇದೆ. ಏಕೆಂದರೆ ಇದು ಅಡ್ಮಿಷನ್‌ಗೆ ಬಂದಂಥ ಸಂದರ್ಭದಲ್ಲಿ ಆರ್ಗ್ಯುಮೆಂಟ್ ಆಗಿದೆ. ಆರ್ಗ್ಯುಮೆಂಟ್ ಆದಮೇಲೆ ಈ ಒಂದು ಇಂಟೀರಿಂ ಆರ್ಡರ್ನು ಮಾಡಿದ್ದಾರೆ. ನಾನು ಯಾವ ವಿಚಾರ ಹೇಳಿದೆ ಅದೇ ವಿಚಾರವನ್ನು ಅಡ್ವೊಕೇಟ ಜನರಲ್ ಅವರು ನನಗೆ ಹೇಳಿದರು. ಈ ತರಹ ಇದೆ, ಹೇಗೆ ಒಂದು ಪ್ರಮಾಣಪತ್ರವನ್ನು ರಾಜ್ಯ ಸರ್ಕಾರದ ವತಿಯಿಂದ ನಾವು ದಾಖಲು ಮಾಡಬೇಕು ಎಂಬುದನ್ನು ಹೇಳಿದ್ದಾರೆ. ಆ ಕೆಲಸವನ್ನು ಅವರು ಮಾಡುತ್ತಿದ್ದಾರೆ. ಏನಾದರೂ ಬೇರೆ ಬೆಳವಣಿಗೆಗಳು ಬಂದಾಗ ನಾನು ಈ ಸದನಕ್ಕೆ ಆ ವಿಚಾರವನ್ನು ತಿಳಿಸುತ್ತೇನೆ.

ಶ್ರೀ ಎಸ್.ಸುರೇಶ್‌ಕುಮಾರ್: ಸನ್ಮಾನ್ಯ ಅಧ್ಯಕ್ಷರೆ, ಒಂದು ಕ್ಲಾರಿಫೀಕೇಷನ್ ಇಲ್ಲಿ....

ಶ್ರೀ ಟಿ.ಬಿ.ಜಯಚಂದ್ರ: ಸರ್ವೋಚ್ಚ ನ್ಯಾಯಾಲಯದ ತೀರ್ಪು ಬಂದಮೇಲೆ ಈಗ ಇನ್‌ಟೇಕ್ ಕೆಪ್ಯಾಸಿಟಿಯನ್ನು ಕಡಿಮೆ ಮಾಡಿದ್ದರಿಂದ ಸುಮಾರು 600-700ಜನ ಮಕ್ಕಳಿಗೆ ರಾಜ್ಯದ ಸಿ.ಇ.ಟಿ.ಯಲ್ಲಿ ಫೈನಲ್ಲಾಗಿ ಅಡ್ಮಿಷನ್ ಮಾಡುವಂಥ ಸಂದರ್ಭದಲ್ಲಿ ಅಷ್ಟು ಜನರಿಗೆ you are depriving them an opportunity. How do you compensate it? ಇದು ಒಂದು. ಎರಡನೆಯದು....

SRI M.C.NANAIAH: Let's not for a moment presume that there is going to be reduction in the Matrix which have already been prepared. Let's not presume that. We have gone on correct lines taking one side the judgement of the Divisional Bench of the High Court relating to the intake fixed by the Government prior to 1-6-92, and the intake fixed by the Medical Council of India and then approved by the Govt. of India. That is the second part of it and even that has been taken into consideration and as at the moment, there is no question of any reduction. These factual things will be placed before the supreme Court through an affidavit.

ಶ್ರೀ ಎಸ್.ಸುರೇಶ್ ಕುಮಾರ್: ಸಭಾಧ್ಯಕ್ಷರೆ, it is not the question of presumption. ಎಂ.ಸಿ.ಐ. ರೆಕಮೆಂಡ್ ಮಾಡಿದ್ದು ಸೆಂಟ್ರಲ್ ಗೌರ್ನಮೆಂಟಿಗೆ 2105 ಸೀಟು. ಆದರೆ ನಮ್ಮ ಕರ್ನಾಟಕ ಸರ್ಕಾರ ಕೊಟ್ಟಿರುವುದು 2680 ಸೀಟುಗಳು. ಈ ಅನಾಮಲಿ ಬಗ್ಗೆ ಏನು ಹೇಳುತ್ತೀರಿ?

ಶ್ರೀ ಎಂ.ಸಿ.ನಾಣಯ್ಯ: ಅದಕ್ಕೇ ನಾನು ಹೇಳಿದೆ, ಈ ಅನಾಮಲಿಯನ್ನು ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ ಬರೆದುಬಿಟ್ಟಿದ್ದಾರೆ. ಅದನ್ನೇ ಓದಿಕೊಂಡು ನಾವು ಹೇಳುತ್ತಾ ಇದ್ದೇವೆ. 1-6-92ರೊಳಗೆ ಯಾವ ಇನ್‌ಟೇಕನ್ನು ರಾಜ್ಯಸರ್ಕಾರ ಫಿಕ್ಸ್ ಮಾಡಿದೆ ಆ ಇನ್‌ಟೇಕ್ ಮೆಡಿಕಲ್ ಕೌನ್ಸಿಲ್ ರೆಗ್ಯುಲೇಷನ್ ಒಳಗಡೆ ಬರುವುದಿಲ್ಲ. 1-6-92ರ ಮೇಲೆ ಬಂದಿರತಕ್ಕಂಥ ವಿಚಾರ ಯಾವುದುಂಟು, 1-6-92ರ ಮೇಲೆ ಯಾವ ಇನ್‌ಟೇಕನ್ನು ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾದವರು ರೆಕಮೆಂಡ್ ಮಾಡಿ ಗೌರ್ನಮೆಂಟ್ ಆಫ್ ಇಂಡಿಯಾಗೆ ಕಳುಹಿಸಿದ್ದಾರೆ, ಅದು ನಾಲ್ಕು ಕಾಲೇಜ್‌ಗೆ ಸಂಬಂಧಪಟ್ಟಹಾಗೆ ಮಾತ್ರ ಇವತ್ತು ಗೌರ್ನಮೆಂಟ್ ಆಫ್ ಇಂಡಿಯಾ ಅಪ್ರೂವಲ್ ಕೊಟ್ಟಿದ್ದಾರೆ. The Medical Countil of India is only a

recommendatory body. ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾದವರು ರಿಟ್ ಪಿಟಿಷನ್ ಫೈಲ್ ಮಾಡಿದ್ದರಲ್ಲೇ ಅದನ್ನು ಹೇಳಿದ್ದಾರೆ. ದಯವಿಟ್ಟು ಕೇಳಿ. The Medical Council of India is only a recommendatory body. The government of India may accept or reject their recommendations. They can increase or decrease the intake. ಇದು ಇದೆ. ಆದ್ದರಿಂದ This is the fax message which we have received from the Supreme Court. "Issue Notice on the Special Leave Petition as well as on the application for stay returnable in four weeks. In the meanwhile the respondents are directed to confine the admissions to the Medical Colleges in the State of Karnataka to the intake capacity as fixed by the Medical Council of India". ಅದಕ್ಕೇ ನಾನು ಹೇಳಿದೆ ಇದರಲ್ಲಿ ಡೇಟ್ ಗೀಟ್ ಏನೂ ಇಲ್ಲ. 1-6-92 ಕಳೆದಾದಮೇಲೆ ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾಕ್ಕೆ ಅಧಿಕಾರ ಬಂದಿದೆ. 1-6-92ಕ್ಕೆ ಮುಂಚೆ ಮೆಡಿಕಲ್ ಕೌನ್ಸಿಲ್‌ನವರಿಗೆ ಯಾವುದೇ ಅಧಿಕಾರ ಇಲ್ಲ ಎನ್ನತಕ್ಕ ವಾದವನ್ನೇ ನಾನು ಹೇಳುತ್ತಿದ್ದೇನೆ. ಆದ್ದರಿಂದ ಆ ಇಂಟರ್‌ಪ್ರಿಟೇಷನ್ ಮತ್ತು ಇಂಡಿಯನ್ ಎಕ್ಸ್‌ಪ್ರೆಸ್ಸಲ್ಲಿ ಬಂದಿರತಕ್ಕದ್ದು ಯಾವುದುಂಟು ಅದಕ್ಕೂ ಈ ಸುಪ್ರೀಂ ಕೋರ್ಟಿನಲ್ಲಿ ಬಂದಿರತಕ್ಕ ಆರ್ಡರ್, ಬಹುಶಃ ಅವರು ಸ್ವಲ್ಪ ವಿಸ್ತಾರವಾಗಿ ಹೇಳಿಕೊಂಡು ಹೋಗಿದ್ದಾರೆ. ಆದ್ದರಿಂದ ಫ್ಯಾಕ್ಚುಯಲ್ ಪೊಸಿಷನ್ ಏನಿದೆ ಅದನ್ನು ನಾವು ಇವತ್ತು ಸುಪ್ರೀಂ ಕೋರ್ಟಿನ ಮುಂದೆ ನಾಳೆ ಅಫಿಡವಿಟ್ ಫೈಲ್ ಮಾಡುತ್ತಿದ್ದೇವೆ. ಮಾನ್ಯ ಜಯಚಂದ್ರ ಅವರು ಕೇಳಿರತಕ್ಕದ್ದು ನಿಜ. ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಬಂದಿರುವ ವಾದವನ್ನು ಒಪ್ಪಿಕೊಂಡರೆ 600-700 ಸೀಟು ಕರ್ನಾಟಕದ ಮಕ್ಕಳಿಗೆ ಕಡಿಮೆಯಾಗುತ್ತದೆ. ಆ ರೀತಿ ಕಡಿಮೆಯಾಗುವುದಕ್ಕೆ ಅವಕಾಶ ಇಲ್ಲ ಎಂಬ ವಾದವನ್ನೇ ನಾನು ಹೇಳುತ್ತಿರತಕ್ಕದ್ದು. ಇದರಲ್ಲಿ ಎರಡು ತರಹದಲ್ಲಿ ಆಗಿದೆ. ಒಂದು, ನಮ್ಮ ಕಾನೂನನ್ನು ನಾವು ಮಾಡುವಾಗ ಶೇಕಡ 15ರಷ್ಟು ಸೀಟುಗಳನ್ನು ನಾನ್ ಕರ್ನಾಟಕ ಸ್ಟೂಡೆಂಟ್ಸ್‌ಗೆ ಕೊಡಬಾರದು, ಕರ್ನಾಟಕದ ಮಕ್ಕಳಿಗೇ ಇದನ್ನು ಮೀಸಲಾಗಿಡಬೇಕು; ಬಹುಶಃ ಮ್ಯಾಟ್ರಿಕ್ಸ್ ಕಂಪ್ಲೀಟ್ ಆದಮೇಲೆ ಎಲ್ಲಾದರೂ ಸೀಟು ಉಳಿದುಕೊಂಡಿದ್ದರೆ ಆ ಸೀಟುಗಳಲ್ಲಿ ಶೇಕಡ 15ಕ್ಕೆ ಮೀರದಂತೆ ನಾವು ನಾನ್‌ಕರ್ನಾಟಕ ಮಕ್ಕಳಿಗೆ ಕೊಡಬೇಕು ಎಂದು ಮಾಡಿದೆವು. ಕಡೆಗೆ ಅದೂ ಕೂಡ ಏನಾಯಿತು ಸುಪ್ರೀಂ ಕೋರ್ಟಿನವರು, ಇಡೀ ರಾಷ್ಟ್ರದಲ್ಲಿ ನಾನು ಹೇಳುತ್ತಿದ್ದೇನೆ, ಮಹಾರಾಷ್ಟ್ರದಲ್ಲಿರತಕ್ಕ ಕಾನೂನಿನಲ್ಲೂ ಇದೇ ಇದೆ. ಅಲ್ಲಿರತಕ್ಕ ಮಕ್ಕಳಿಗೆ ಕೊಟ್ಟಾದಮೇಲೆ ಎಲ್ಲಾದರೂ ಸೀಟು ಉಳಿದುಕೊಂಡಿದ್ದರೆ ಮಾತ್ರ ಬಹುಶಃ ಅದಕ್ಕೆ ಯಾವುದೇ ತರಹದ ಡೈರೆಕ್ಷನ್ ಏನೂ ಇಲ್ಲ. ನಾನು ಯಾವುದರ ಬಗ್ಗೆಯೂ ಆಪಾದನೆ ಮಾಡುವುದಕ್ಕೆ ತಯಾರಾಗಿಲ್ಲ. ಆದರೆ ಕರ್ನಾಟಕಕ್ಕೆ

ಸಂಬಂಧಪಟ್ಟಹಾಗೆ ಕಳೆದ ಎರಡು ಮೂರು ವರ್ಷಗಳಿಂದ ನಾವು ಈ ವಿಚಾರವನ್ನು ಮಾಡಿಕೊಂಡು ಪ್ರತಿ ಸಂದರ್ಭದಲ್ಲೂ ನಮಗೊಂದು ಇಂಟೀರಿಯಂ ಆರ್ಡರ್ ಬರುತ್ತದೆ. ಈ ವರ್ಷವೂ ಕೂಡ ಸುಪ್ರೀಂ ಕೋರ್ಟಿನಲ್ಲಿ ಇದೇ ವಿಚಾರ ಬಂದಾಗ ನಾವು ನಮ್ಮ ವಾದವನ್ನು ಮಾಡಿದೆವು. ಕರ್ನಾಟಕದ ಬಗ್ಗೆ ವಿಚಾರ ಬಂದಾಗ ಹೇಗೂ ಇಂಟೀರಿಯಂ ಆರ್ಡರ್ 15 ಪರ್ಸೆಂಟ್‌ಗೆ ಬಂದಿದೆ. ನಾವು ಅದನ್ನು ಈಗ ಮಾಡಲೇಬೇಕಾದ ಪರಿಸ್ಥಿತಿ ಬಂದಿದೆ. ಅದನ್ನು ಮಾಡುತ್ತೇವೆ. ಆದ್ದರಿಂದ ನಾವು ಆ ಅಫಿಡೆವಿಟನ್ನು ಫೈಲ್ ಮಾಡುತ್ತೇವೆ. ಬೆಳವಣಿಗೆಗಳು ಏನಾದರೂ ಆದರೆ ಏಕೆಂದರೆ ಮಕ್ಕಳ ಮನಸ್ಸಿನಲ್ಲಿ ನಾವು ಮ್ಯಾಟ್ರಿಕ್ಸ್ ಏನೋ ಒಂದು ಮಾಡಿದ್ದೇವೆ, ನಾವು ಏನೋ ಉಲ್ಲಂಘನೆ ಮಾಡಿದ್ದೇವೆ ಎಂದು ಅಭಿಪ್ರಾಯ ಮಾಡುತ್ತಾ ಇರತಕ್ಕಂಥ ಹಿನ್ನೆಲೆಯಲ್ಲಿ ನಾವು ಇದನ್ನು ಚರ್ಚೆ ಮಾಡುವುದು ಸರಿಯಲ್ಲ ಎಂದು ಹೇಳಿ ಯಾವುದನ್ನು ವಾಸ್ತವಾಂಶವಾಗಿ ನಾವು ಸುಪ್ರೀಂ ಕೋರ್ಟಿಗೆ ದಾಖಲೆ ಮಾಡಬೇಕು ಅದನ್ನು ದಾಖಲೆ ಮಾಡಲಿಕ್ಕೆ ಅಡ್ವೊಕೇಟ್ ಜನರಲ್ ಡೆಲ್ಲಿಯಲ್ಲಿದ್ದಾರೆ. ಆ ಕೆಲಸವನ್ನು ಮಾಡಿಯಾದ ಮೇಲೆ ಮುಂದೆ ಬರುತ್ತಾ ಇರತಕ್ಕಂಥ ಯಾವುದೇ ಬೆಳವಣಿಗೆಯನ್ನು ನಮ್ಮ ಮಕ್ಕಳ ಹಿತದೃಷ್ಟಿಯಿಂದ ಕರ್ನಾಟಕ ರಾಜ್ಯಕ್ಕೆ ಹೆಚ್ಚು ಸೀಟು ಸಿಗಲೇಬೇಕಾಗುತ್ತದೆ. ನಮ್ಮ ಮಕ್ಕಳಿಗೆ ಸಿಗಬೇಕಾಗುತ್ತದೆ. ಏಕೆಂದರೆ 700 ಸೀಟು ಅಂದರೆ ಅದರಲ್ಲಿ ಫ್ರೀ ಸೀಟು ಪೇಮೆಂಟ್ ಸೀಟು ನಮ್ಮ ಮಕ್ಕಳಿಗೇ ಬರಬೇಕಾಗುತ್ತದೆ. ಆ ಕೆಲಸವನ್ನು ಮಾಡಬೇಕಾಗಿರತಕ್ಕ ಹಿನ್ನೆಲೆಯಲ್ಲೇ ನಾವು ಈ ಕ್ರಮ ಕೈಗೊಂಡಿದ್ದೇವೆ. ನಾನೂ ಕೂಡ ಮೊನ್ನೆಯಿಂದಲೇ ಈ ಕೆಲಸವನ್ನು ಮಾಡುತ್ತಾ ಇದ್ದೇನೆ. ದಯವಿಟ್ಟು ನೀವು ಸಹಕಾರವನ್ನು ಕೊಡಿ.

ಶ್ರೀ ಎಸ್.ಸುರೇಶ್ ಕುಮಾರ್: ಒಂದು ಸತ್ಯಕ್ಕೆ ದೂರವಾದ ಸಂಗತಿಯನ್ನು ಹೇಳಿದರು.

ಶ್ರೀ ಎಂ.ಸಿ.ನಾಣಯ್ಯ: ಯಾವುದು ಸತ್ಯಕ್ಕೆ ದೂರವಾದುದು?

ಶ್ರೀ ಎಸ್.ಸುರೇಶ್‌ಕುಮಾರ್: ಎಂ.ಸಿ.ಐ. ಏನಿದೆ After that 1-6-92, It is a creature of the Parliament. ನೀವು ಅದು ಬರಿ ರೆಕಮೆಂಡೇಟರಿ ಬಾಡಿ ಎಂದು ಹೇಳಿದಿರಿ. I think you are wrong. It is mandatory. After 1-6-92, it becomes mandatory.

SRI M.C.NANAIAH: Let me speak with that much of authority and responsibility, it is not mandatory. The Government of India is the ultimate authority. The Medical Council of India is only a recommending authority to the Government of India. The Government of

India which is the ultimate authority under Sections 10 (A), 10(B) and 10 (C) of the Act, let me make it very clear to you.

ಉಪಾಧ್ಯಕ್ಷರು: ಆಯಿತು. ಪುಟ್ಟಣ್ಣಯ್ಯನವರು....

ಶ್ರೀ ಎ.ರಾಮದಾಸ್: ಮಾನ್ಯ ಉಪಾಧ್ಯಕ್ಷರೇ....

ಉಪಾಧ್ಯಕ್ಷರು: ಇಲ್ಲ ಇಲ್ಲ, ತಾವು ಕೂಡಿರಿ. ಅವರು ಸಾಕಷ್ಟು ಹೇಳಿದ್ದಾರೆ. ಈ ವಿಷಯದಲ್ಲಿ ಮತ್ತೆ ಚರ್ಚೆ ಮಾಡಬೇಕಾದದ್ದು ಇಲ್ಲ. ಪುಟ್ಟಣ್ಣಯ್ಯನವರೇ, ತಾವು ಹೇಳಿರಿ....

ಶ್ರೀ ಎ.ರಾಮದಾಸ್: ಈ ಸದನದಲ್ಲಿ ಚರ್ಚೆಯಾಗಿದೆ. ನಾನು ಸದನದಲ್ಲಿ....

ಉಪಾಧ್ಯಕ್ಷರು: ಇಲ್ಲ, ಸಾಧ್ಯವಿಲ್ಲ. ರಾಮದಾಸ್, ತಾವು ಕುಳಿತುಕೊಳ್ಳಬೇಕು. ಪುಟ್ಟಣ್ಣಯ್ಯನವರೇ, ತಾವು ಕೇಳಿ....

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಸನ್ಮಾನ್ಯ ಉಪಾಧ್ಯಕ್ಷರೇ....

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ: ಅಧ್ಯಕ್ಷರೇ, ಇದು ಬಹಳ ಸುಲಭವಾದ ವಿಚಾರ ಅಲ್ಲ.

ಉಪಾಧ್ಯಕ್ಷರು: ಯಡಿಯೂರಪ್ಪನವರೇ, ಇದು ಜಿರೋ ಅವರ್. ಇದನ್ನು ಯಾವ ರೀತಿ ಮಾಡುವುದು, ನೀವೇ ಹೇಳಿ.

ಶ್ರೀ ಎ.ರಾಮದಾಸ್: ಮಾನ್ಯ ಉಪಾಧ್ಯಕ್ಷರೇ....

ಉಪಾಧ್ಯಕ್ಷರು: ನಾನು ಪುಟ್ಟಣ್ಣಯ್ಯ ಅವರನ್ನು ಕರೆದಿದ್ದೇನೆ. ತಾವು ಕುಳಿತುಕೊಳ್ಳಿ.

ಶ್ರೀ ಬಿ.ಎಸ್.ಯಡಿಯೂರಪ್ಪ: ಒಂದು ನಿಮಿಷ. ತಾವು ಅವಕಾಶ ಕೊಟ್ಟಿದ್ದೀರಿ....

ಉಪಾಧ್ಯಕ್ಷರು: ತಮ್ಮ ಪಕ್ಷದ ಸದಸ್ಯರುಗಳು ಎಲ್ಲಾ ಈಗ ಮಾತನಾಡಿದ್ದಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ತಾವು ಅವಕಾಶ ಕೊಟ್ಟಿದ್ದೀರಿ. ಅದಕ್ಕಾಗಿ ಧನ್ಯವಾದಗಳು. ಇದು ಬಹಳ ಪ್ರಮುಖವಾದ ವಿಷಯವಾಗಿರುವುದರಿಂದ.....

ಉಪಾಧ್ಯಕ್ಷರು: ಇದನ್ನು ಬೇರೆ ರೂಪದಲ್ಲಿ ಕಳುಹಿಸಿಕೊಡಿ.

ಶ್ರೀ ಬಿ.ಎಸ್.ಯಡಿಯೂರಪ್ಪ: ಅವರೇ ಪಿಟಿಷನರ್ ಆಗಿರುವುದರಿಂದ ಒಂದೇ ಒಂದು ಕ್ಲಾರಿಫಿಕೇಷನ್ ಕೇಳುತ್ತಾರೆ.

ಉಪಾಧ್ಯಕ್ಷರು: ಆಚೆ ಕಡೆ ಕೇಳಿದರೆ ಮತ್ತೆ ಈಕಡೆ ಕೇಳುತ್ತಾರೆ. ಜಿರೋ ಅವರ್‌ನಲ್ಲಿ ಇದನ್ನು ಹೇಗೆ ಮಾಡುವುದು?

ಶ್ರೀ ಬಿ.ಎಸ್.ಯಡಿಯೂರಪ್ಪ: ಅವರೇ ಕೋರ್ಟಿಗೆ ಹೋಗಿದ್ದಾರೆ. ಅವರು ಒಂದು ಕ್ಲಾರಿಫಿಕೇಷನ್ ಕೇಳುತ್ತಾರೆ, ಅದಕ್ಕೆ ಅವಕಾಶಕೊಡಿ.

ಶ್ರೀ ಎ.ರಾಮದಾಸ್: ಇದೇ ಸದನದಲ್ಲಿ ಅವರು ಹೇಳಿದ ರೀತಿಯಲ್ಲಿ 10ಎ, 10ಬಿ, 10ಸಿ ರಲ್ಲಿ ಇರುವಂಥ ವಿಷಯಗಳ ಬಗ್ಗೆ ಚರ್ಚೆಯಾಯಿತು. ಆನಂತರ ಇಲ್ಲಿ ನಿರ್ಧಾರ ಆಗದೇ ಇರುವಂಥ ಸಂದರ್ಭದಲ್ಲಿ ಹೈಕೋರ್ಟಿನಲ್ಲಿ ನಾನು ಒಬ್ಬ ಪಿಟಿಷನರ್ ಆಗಿ ಕೇಸ್ ಹಾಕಿದ್ದೆ. ಬರೂಕಾ ಅವರ ಜಡ್ಜ್‌ಮೆಂಟ್‌ನಲ್ಲಿ ಅವರು ಏನು ಹೇಳಿದ್ದಾರೆ, ಅದು ಆದ ನಂತರ ಇವರ ರಿವಿಷನ್ ಪಿಟಿಷನ್ ಡಬಲ್ ಬೆಂಚ್‌ಗೆ ಹೋಯಿತು. ಡಬಲ್ ಬೆಂಚ್‌ಗೆ ಹೋಗಿದ್ದನ್ನು ಸುಪ್ರೀಂ ಕೋರ್ಟಿನವರು ಸ್ಟೇ ಕೊಟ್ಟಿರುವುದರಿಂದ ಸಿಂಗಲ್‌ಬೆಂಚ್ ಜಡ್ಜ್‌ಮೆಂಟ್ ಏನಾಗಿದೆ, ಇಟ್ ಹೋಲ್ಡ್ಸ್‌ಗುಡ್. ಅದರ ಪ್ರಕಾರ ಇಲ್ಲಿ ಈಗ ಸಮಸ್ಯೆ ಆಗುತ್ತಿರುವುದು. ಅದು ನಿಜವೇ ಎಂಬುದನ್ನು ಹೇಳಬೇಕು.

ಶ್ರೀ ಎಂ.ಸಿ.ನಾಣಯ್ಯ: ಮಾನ್ಯ ಉಪಸಭಾಧ್ಯಕ್ಷರೇ, ಮಿತ್ರರಾಗಿರತ್ಕಂಥ ಮಾನ್ಯ ರಾಮದಾಸ್ ಅವರು ವಿಚಾರವನ್ನು ಸ್ವಲ್ಪಮಟ್ಟಿಗೆ ಪೂರ್ತಿಯಾಗಿ ತಿಳಿದಿಲ್ಲವೆಂದು ಕಾಣುತ್ತದೆ. ನಿಜ. ನೀವೇ ಒಬ್ಬ ಅರ್ಜಿದಾರರು ಎಂಬುದು ನನಗೆ ಗೊತ್ತಿದೆ. ಬರೂಕಾ ಅವರ ಯಾವ ಒಂದು ಜಡ್ಜ್‌ಮೆಂಟ್ ಇದೆ, ಅದರಲ್ಲಿ ಇದೇ ವಿಚಾರವನ್ನು ಪ್ರಸ್ತಾಪ ಮಾಡಿ ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾದವರು ಯಾವುದನ್ನು ಅವರು ನಿಗದಿ ಮಾಡುತ್ತಾರೋ ಅದೇ ಅಂತಿಮವಾಗುತ್ತದೆ. ಮತ್ತೆ ಉಚ್ಚನ್ಯಾಯಾಲಯಕ್ಕೆ ಕೂಡ ಅದನ್ನು ಪ್ರಶ್ನೆ ಮಾಡತಕ್ಕಂಥ ಅಧಿಕಾರ ಇಲ್ಲ ಎಂದು ಹೇಳುತ್ತಾ ಇರತಕ್ಕಂಥ ಒಂದು ತೀರ್ಪನ್ನು ಕೊಟ್ಟರು. ಅದು ಡಿವಿಜನ್ ಬೆಂಚ್‌ಗೆ ಬಂದಾಗ ಜಸ್ಟೀಸ್ ರಾಜೇಂದ್ರಬಾಬು ಮತ್ತು ಇನ್ನೊಬ್ಬ ನ್ಯಾಯಾಧೀಶರು ಒಂದು ತೀರ್ಮಾನವನ್ನು ಕೊಟ್ಟರು. ಈ ಉಚ್ಚನ್ಯಾಯಾಲಯಕ್ಕೆ ಸಂಪೂರ್ಣವಾಗಿ ಇರತಕ್ಕಂಥ ಅಧಿಕಾರವನ್ನು ಯಾರಿಂದಲೂ ತಡೆಹಿಡಿಯುವುದಕ್ಕೆ ಆಗುವುದಿಲ್ಲ. ಆದ್ದರಿಂದ ಏಕಪೀಠ ನ್ಯಾಯಾಲಯದವರು ಕೊಟ್ಟಿರತಕ್ಕಂಥ ಈ ಒಂದು ತೀರ್ಪು ಏನಿದೆ, ಅದನ್ನು ನಾವು ಒಪ್ಪುವುದಿಲ್ಲ. ಎರಡನೆಯದು, 1.6.92ಕ್ಕೆ ಮುಂಚೆ ಯಾವ ರಾಜ್ಯಸರ್ಕಾರಕ್ಕೆ ಅಧಿಕಾರ ಇತ್ತು, ಆ ರಾಜ್ಯ ಸರ್ಕಾರಕ್ಕೆ ಇರತಕ್ಕಂಥ ಅಧಿಕಾರ ಎಂ.ಸಿ.ಐ. ರೆಗ್ಯುಲೇಷನ್ಸ್‌ಗೆ ಒಳಪಡುವುದಿಲ್ಲ. ಇದು ಎರಡು. ಇದಾದ ಮೇಲೆ ಎಂ.ಸಿ.ಐ.ನವರು ತೆಗೆದುಕೊಂಡು ಈಗ ಸುಪ್ರೀಂ ಕೋರ್ಟಿಗೆ ಹೋಗಿದ್ದಾರೆ. ಸುಪ್ರೀಂ ಕೋರ್ಟಿನವರು ಕೊಟ್ಟಿರತಕ್ಕಂಥಾದ್ದು ಸ್ಟೇ ಮಾಡಲಿಲ್ಲ. ಅವರು ಒಂದು ಆರ್ಡರ್‌ನ್ನು ಮೀನ್‌ವೈಲ್ ಸ್ಟೇ ಪೆಟಿಷನ್‌ಗೆ ನಾಲ್ಕು ವಾರಗಳ ಸಮಯ

ಕೊಟ್ಟಿದ್ದಾರೆ. ಸ್ಟೇ ಮಾಡಲಿಕ್ಕೆ ಇರತಕ್ಕಂಥ ಅವರ ಅರ್ಜಿ ಯಾವುದು ಇದೆ, ಉಚ್ಚ ನ್ಯಾಯಾಲಯದ ಡಿವಿಜನ್ ಬೆಂಚ್‌ನ ತೀರ್ಪನ್ನು ತಡೆಹಿಡಿಯಬೇಕು ಎಂದು ಕೊಟ್ಟಿರತಕ್ಕಂಥ ಅರ್ಜಿ ಯಾವುದು ಇದೆ, ಎಂ.ಸಿ.ಐ.ನವರು, ಅದಕ್ಕೆ ನೋಟೀಸ್‌ನ್ನು ಕೊಟ್ಟು ನಾಲ್ಕುವಾರಗಳ ಸಮಯವನ್ನು ಕೊಟ್ಟಿದ್ದಾರೆ. ಇನ್ ದಿ ಮೀನ್‌ವೈಲ್ ಈ ಒಂದು ಅಬ್ಸರ್‌ವೇಷನ್ ಅನ್ನು ಮಾಡಿದ್ದಾರೆ. ಅದಕ್ಕೆ ನಾವು ರಾಜ್ಯಸರ್ಕಾರದ ವತಿಯಿಂದ ಫ್ಯಾಕ್ಟುಯಲ್ ಆಗಿರತಕ್ಕಂಥ ಆ ವರದಿಯನ್ನು ಸುಪ್ರೀಂ ಕೋರ್ಟ್ ಮುಂದೆ ದಾಖಲು ಮಾಡುತ್ತೇವೆ.

ಉಪಾಧ್ಯಕ್ಷರು: ಶ್ರೀ ಪುಟ್ಟಣ್ಣಯ್ಯನವರು....

(ಈ) ಹದಿನೆಂಟು ಸಾವಿರ ರೂಪಾಯಿ ಆದಾಯ ಮಿತಿ ಮೀರಿದವರ ಹುಲ್ಲು ಮೆದೆಗೆ ಬೆಂಕಿ ಬಿದ್ದಿದ್ದರೂ ಪರಿಹಾರ ನೀಡದಿರುವುದು.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಮಾನ್ಯ ಕಂದಾಯ ಮಂತ್ರಿಗಳಿಗೆ ಈ ದನಗಳ ಮೇವಿನ ಬಗ್ಗೆ ಕೇಳುತ್ತಿದ್ದೇನೆ....

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಇದಕ್ಕೆ ಯಾರು ಉತ್ತರ ಕೊಡಬೇಕು ಎಂದು ಅವರಲ್ಲೇ ಜಿಜ್ಞಾಸೆ ಉಂಟಾಗಿದೆ. ದನದ ಮಂತ್ರಿಗಳೋ, ಇಲ್ಲ ಕೃಷಿ ಮಂತ್ರಿಗಳೋ? ಯಾರು ಉತ್ತರ ಕೊಡಬೇಕು?

ಉಪಾಧ್ಯಕ್ಷರು: ಮೊದಲು ಅವರು ಪ್ರಶ್ನೆ ಕೇಳಲಿ. ಆಮೇಲೆ ಉತ್ತರ ಕೊಡುತ್ತಾರೆ. ನೀವು ಪ್ರಶ್ನೆಯನ್ನು ಕೇಳಿ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಬಿಹಾರ್‌ನಲ್ಲಿ ಆಗಿರತಕ್ಕಂಥ ಒಂದು ವಿಷಯ ಕರ್ನಾಟಕ ಸರ್ಕಾರದಲ್ಲಿ ಬಂದಿಲ್ಲದೇ ಇರುವುದರಿಂದ ಅದು ಅಲ್ಲ. ಮಾನ್ಯ ಉಪಾಧ್ಯಕ್ಷರೇ, ದನಗಳ ಮೇವಿನ ಹುಲ್ಲಿನ ಬಣವೆಗಳಿಗೆ ಆಕಸ್ಮಿಕವಾಗಿ ಬೆಂಕಿಬಿದ್ದು ಸುಟ್ಟುಹೋದರೆ ಅದಕ್ಕೆ ಪರಿಹಾರ ಕೊಡುವ ವಿಚಾರದಲ್ಲಿ ಆದಾಯ ಮಿತಿ ನೆಪದಲ್ಲಿ ರೈತರಿಗೆ ವಂಚಿಸುತ್ತಿದ್ದು ಅದನ್ನು ನಾನು ಪ್ರಶ್ನೆ ಮಾಡುತ್ತಿದ್ದೇನೆ. ಮಾನ್ಯ ಉಪಾಧ್ಯಕ್ಷರೇ, ನೆಲ್ಲುಹುಲ್ಲಿಗೆ ಬೆಂಕಿ ಬಿದ್ದರೆ ಇಷ್ಟಿಷ್ಟಕ್ಕೇ ಬೆಂಕಿಬೀಳಬೇಕು ಎಂದು ಬೆಂಕಿಗೆ ಕಾನೂನು ಏನಾದರೂ ಮಾಡಿದ್ದೀರೊ ಎಂಬುದು ಗೊತ್ತಿಲ್ಲ. ಒಂದು ಉದಾಹರಣೆಯನ್ನು ತಮಗೆ ನಾನು ಕೊಡುತ್ತೇನೆ. ನೆಲ್ಲುಹುಲ್ಲು ಮೆದೆಗೆ ಬೆಂಕಿಬಿದ್ದರೆ 18 ಸಾವಿರ ರೂಪಾಯಿ ಆದಾಯ ಮಿತಿಯ ಕಾರಣದಿಂದ ನಷ್ಟ ಉಂಟಾದ ವ್ಯಕ್ತಿಗೆ ಪರಿಹಾರ ಕೊಡುವುದಕ್ಕೆ ಬರುವುದಿಲ್ಲ ಎಂದು ಹೇಳಿ ತಹಸೀಲ್ದಾರರು ಎಂಡಾರ್ಸ್‌ಮೆಂಟ್ ಕೊಟ್ಟಿದ್ದಾರೆ. ಅದು ಎಷ್ಟೇ ಆಗಲಿ, ಆದಾಯ ಮಿತಿ ಎಂದರೆ ತಾವು ಬೆಂಕಿಗೆ ಏನಾದರೂ ಆದಾಯಮಿತಿ ಫಿಕ್ಸ್